ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಬಾದಾಮಿಗೆ ಅಗ್ನಿಶಾಮಕ ಠಾಣೆ ತೆರೆಯಲು ಮಂಜೂರಾತಿ ನೀಡಿ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

**ಶ್ರೀ ವಿ.ಸೋಮಣ್ಣ(ಸೆರಿಮನೆ, ಗೃಹ ರಕ್ಷಕ ದಳ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು):-** (ಅ) 68

(ಆ) 1996-97ನೇ ಸಾಲಿನಲ್ಲಿ 7 ಅಗ್ನಿ ಶಾಮಕ ಠಾಣೆಗಳನ್ನು ಮಂಜೂರು ಮಾಡಬೇಕೆಂದು ಸರ್ಕಾರ ಉದ್ದೇಶಿಸಿದೆ.

(ಇ) ಪ್ರತಿ ತಾಲ್ಲೂಕು ಕೇಂದ್ರದಲ್ಲೂ ಒಂದು ಅಗ್ನಿ ಶಾಮಕ ಠಾಣೆಯನ್ನು ಸ್ಥಾಪಿಸುವುದು ಸರ್ಕಾರದ ನೀತಿಯಾಗಿದೆ. ಅದರಂತೆ ಬಾದಾಮಿಯಲ್ಲಿ ಕೂಡ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲಾಗುವುದು.

(ಈ) ಆದ್ಯತೆ ಹಾಗೂ ಹಣಕಾಸಿನ ಲಭ್ಯತೆ ಇವುಗಳನ್ನು ಆಧರಿಸಿ ಪ್ರತಿ ವರ್ಷ ಅಗ್ನಿ ಶಾಮಕ ಠಾಣೆಗಳನ್ನು ತೆರೆಯಲಾಗುತ್ತಿದ್ದು, ಅದರಂತೆ ಇದೇ ನೀತಿಯನ್ನನುಸರಿಸಿ ಬಾದಾಮಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯಲಾಗುವುದು.

**ವಿಷಯ:-** ವಿವಿಧ ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:78( 162)

**ಶ್ರೀ ಬಿ.ಬಿ.ಚಿಮ್ಮನಕಟ್ಟಿ(ಬಾದಾಮಿ):-** ಮಾನ್ಯ ಕಾಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಮಲಪ್ರಭ ಹಾಗು ಘಟಪ್ರಭ ಕಾಡಾ ಯೋಜನೆಯ ವ್ಯಾಪ್ತಿಯಲ್ಲಿ ಎಷ್ಟು ತಾಲ್ಲೂಕುಗಳು ಬರುತ್ತದೆ (ತಾಲ್ಲೂಕುಗಳ ವಿವರ ನೀಡುವುದು)

ಆ) 1991 ರಿಂದ 1995-96ರ ವರೆಗೆ ಪ್ರತಿಯೊಂದು ತಾಲ್ಲೂಕಿನಲ್ಲಿ ವಿವಿದ ಯೋಜನೆ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು? (ಆರ್ಥಿಕ ಹಾಗೂ ಭೌತಿಕ ವಿವರ ಒದಗಿಸುವುದು)

ಇ) ಬಾದಾಮಿ ತಾಲ್ಲೂಕಿನಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಇವುಗಳು ಯಾವ ಹಂತದಲ್ಲಿ ಇವೆ?

**ಶ್ರೀ ಕೆ.ವೆಂಕಟೇಶ್(ಕಾಡಾ ಸಚಿವರು):-** (ಅ) ಮಲಪ್ರಭ ಮತ್ತು ಘಟಪ್ರಭ ಯೋಜನೆಗಳ ವ್ಯಾಪ್ತಿಯಲ್ಲಿ ಅನುಕ್ರಮವಾಗಿ 11 ಮತ್ತು 9 ತಾಲ್ಲೂಕುಗಳು ಬರುತ್ತವೆ. ತಾಲ್ಲೂಕುಗಳ ಹೆಸರುಗಳನ್ನು ಅನುಬಂಧ- 1ರಲ್ಲಿ ಕೊಡಲಾಗಿದೆ.

(ಆ) 1991ರಿಂದ 1996ರ ವರೆಗೆ, ಸದರಿ ಯೋಜನೆಗಳಡಿಯಲ್ಲಿ ವಿವಿಧ ತಾಲ್ಲೂಕಿನಲ್ಲಿ ಕಾಡಾದ ಮುಖ್ಯ ಕಾರ್ಯಕ್ರಮಗಳಾದ ಹೊಲಗಾಲುವೆ ನಿರ್ಮಾಣ, ವಾರಾಬಂಧಿ, ಆಯಕಟ್ಟು ರಸ್ತೆಗಳು ಮತ್ತು ಇತರೆ ಹಾಗೂ ವಿಶ್ವ ಆಹಾರ ಯೋಜನೆಯಡಿಯಲ್ಲಿ ಹಲವು ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ತಾಲ್ಲೂಕು ವಿವರಗಳನ್ನು ಅನುಬಂಧ- 1ರಲ್ಲಿ ಕೊಡಲಾಗಿದೆ.

(ಇ) ಬಾದಾಮಿ ತಾಲ್ಲೂಕಿನಲ್ಲಿ 91ರಿಂದ 96ರವರೆಗೆ ರೂ. 112.84 ಲಕ್ಷಗಳಷ್ಟು

ಹೊಲಗಾಲುವೆ ಕಾಮಗಾರಿಗಳು, ರೂ. 10.41 ಲಕ್ಷಗಳಷ್ಟು ಆಯಕಟ್ಟು ರಸ್ತೆ ಕಾಮಗಾರಿಗಳನ್ನು ಹಾಗೂ ರೂ. 32.95 ಲಕ್ಷಗಳಷ್ಟು ವಿಶ್ವ ಆಹಾರ ಯೋಜನೆ ಅಡಿಯಲ್ಲಿ 18 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯ ವಿವಿಧ ಹಂತಗಳಲ್ಲಿದ್ದು, ಹಲವು ಪೂರ್ಣಗೊಂಡಿವೆ.

**ಅನುಬಂಧ- 1**

ರೂ. ಲಕ್ಷಗಳಲ್ಲಿ.

| ಕ್ರಮ ಸಂಖ್ಯೆ | ತಾಲ್ಲೂಕು | ಕಾರ್ಯಕ್ರಮಗಳ ವಿವರ 1991ರಿಂದ 1996ರ ವರೆಗೆ | | |
|---|---|---|---|---|
| | | ಕಾಡಾ | ವಿಶ್ವ ಆಹಾರ ಯೋಜನೆ | |
| | | ಆರ್ಥಿಕ | ಆರ್ಥಿಕ | ಭೌತಿಕ (ಸಂಖ್ಯೆಗಳಲ್ಲಿ) |
| 1) | ಬಾದಾಮಿ | 123.25 | 32.96 | 18 |
| 2) | ಬೈಲಹೊಂಗಲ | - | 63.15 | 25 |
| 3) | ಗದಗ | - | - | - |
| 4) | ಹುಬ್ಬಳ್ಳಿ | - | 20.58 | 2 |
| 5) | ನವಲಗುಂದ | 222.99 | 28.96 | 9 |
| 6) | ನರಗುಂದ | 69.18 | 10.19 | 8 |
| 7) | ರಾಮದುರ್ಗ | 47.31 | 46.45 | 12 |
| 8) | ರೋಣ | 4.33 | 35.49 | 8 |
| 9) | ಸವದತ್ತಿ | 41.30 | 104.62 | 28 |
| 10) | ಬ್ಯಾಡಗಿ | - | 5.12 | 1 |
| 11) | ಬೆಳಗಾವಿ | - | 3.24 | 1 |
| 12) | ಅಥಣಿ | 4.70 | 10.41 | 3 |
| 13) | ಬಾಗಲಕೋಟೆ | - | 1.68 | 6 |
| 14) | ಬೀಳಗಿ | 1.28 | 9.80 | 3 |
| 15) | ಚಿಕ್ಕೋಡಿ | 16.03 | 2.79 | 2 |
| 16) | ಗೋಕಾಕ್ | 83.11 | 34.74 | 8 |
| 17) | ಜಮಖಂಡಿ | 60.49 | 10.71 | 5 |
| 18) | ಮುಧೋಳ್ | 7.94 | 6.38 | 6 |
| 19) | ಹುಕ್ಕೇರಿ | 88.74 | 16.29 | 7 |
| 20) | ರಾಯಭಾಗ | 23.35 | 12.83 | 3 |
| | ಒಟ್ಟು | 794.30 | 456.39 | 155 |

**ಟಿಪ್ಪಣಿ:-** ಕಾಡಾ ಕಾರ್ಯಕ್ರಮದಡಿಯಲ್ಲಿ ವಿವಿಧ ರೀತಿಯ ಯೋಜನೆಗಳಿರುವುದರಿಂದ ಆರ್ಥಿಕ ವಿವರಗಳನ್ನು ಮಾತ್ರ ಒದಗಿಸಲಾಗಿದೆ.

**ವಿಷಯ:-** ಸರ್ಕಾರಿ ನೌಕರರ ವರ್ಗಾವಣೆ ನಿಯಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:79(257)

**ಶ್ರೀ ಕೆ.ಎಸ್.ಈಶ್ವರಪ್ಪ(ಶಿವಮೊಗ್ಗ):-** ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ರಾಜ್ಯದ ಸರ್ಕಾರಿ ನೌಕರರ ವರ್ಗಾವಣೆ ಬಗ್ಗೆ ಸರ್ಕಾರ ನೀತಿ ನಿಯಮಗಳನ್ನು ನಿಶ್ಚಯಿಸಿದೆಯೇ?

ಆ) ಈ ವರ್ಷ ವರ್ಗಾವಣೆ ಬಗ್ಗೆ ನಿರ್ದಿಷ್ಟ ನಿಲುವನ್ನು ಸರ್ಕಾರದವರು ಸ್ಪಷ್ಟಪಡಿಸುವರೆ?

**ಶ್ರೀ ಜೆ.ಹೆಚ್.ಪಟೇಲ್(ಮುಖ್ಯ ಮಂತ್ರಿಗಳು):-** (ಅ) ಮಾರ್ಗಸೂಚಿಗಳನ್ನು ಹೊರಡಿಸಲಾಗದೆ.

(ಆ) 1996-97ರ ಸಾಲಿನಲ್ಲಿ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 3 ಸೇನೌವ 96, ದಿನಾಂಕ: 14-5-1996ರಲ್ಲಿ ಹೇಳಿದ ನಿರ್ದಿಷ್ಟ ಸಂದರ್ಭಗಳ ಹೊರತಾಗಿ ಯಾವುದೇ ವರ್ಗಾವಣೆಗಳನ್ನು ಮಾಡಬಾರದೆಂದು ನಿಲುವನ್ನು ಸ್ಪಷ್ಟಪಡಿಸಲಾಗಿದೆ.

**ವಿಷಯ:-** ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:80(374)

**ಶ್ರೀ ಜಗದೀಶ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ):-** ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) 1995-96ನೇ ಸಾಲಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಅಡಿಯಲ್ಲಿ ಯಾವ ಯಾವ ಕೆಲಸ ಕಾರ್ಯಗಳನ್ನು ಕೈಗೊಳ್ಳಲಾಗಿದೆ, (ಅವುಗಳ ವಿವರಗಳನ್ನು ಒದಗಿಸುವುದು)

(ಅನುಮೋದನೆ ಪಡೆದ ನಂತರ)

ಆ) 1996-97ನೇ ಸಾಲಿಗಾಗಿ ಮಂಡಳಿಗೆ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ ಹಾಗೂ ಈ ಹಣವನ್ನು ಯಾವ ಯಾವ ಕೆಲಸಗಳಿಗಾಗಿ ವಿನಿಯೋಗಿಸಲಾಗುವುದು?

**ಶ್ರೀ ಕೆ.ವೆಂಕಟೇಶ್(ಪ್ರದೇಶಾಭಿವೃದ್ಧಿ ಮತ್ತು ಕಾಡಾ ಸಚಿವರು):-** (ಅ) 1995-96ನೇ ಸಾಲಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಡಿಯಲ್ಲಿ ಯಾವುದೇಕೆಲಸ ಕಾರ್ಯಗಳನ್ನು ಕೈಗೊಂಡಿರುವುದಿಲ್ಲ. ಆದರೆ ವಿವಿಧ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿದ್ದು ಅದನ್ನು ಮಂಡಳಿಯ ಸಭೆಯಲ್ಲಿ ಮಂಡಿಸಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

(ಆ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 1996-97ನೇ ಸಾಲಿನಲ್ಲಿ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ:

1) ಗಿರಿಜನ ಉಪಯೋಜನೆ

(2402-00-796-0-02) 43.00 ಲಕ್ಷಗಳು